**O.S.282-17 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R G D, ವಕೀಲರಿಂದಃ**

5. ದಾವಾ ಶೆಡ್ಯೂಲ್ - ಬಿ ದಲ್ಲಿ ಸಿ ಟಿ ಎಸ್ ನಂಃ 914+915/2 ಹಾಗೂ 914+915/3, ನೂರಾನಿ ಮಾರ್ಕೇಟ್. ಈ ಎರಡು ಆಸ್ತಿಗಳು ಒಂದಕ್ಕೊಂದು ಹೊಂದಿಕೊಂಡಿವೆ ಅಂದರೆ ಸರಿ. ನಿಪಿ.8 ರಲ್ಲಿ ಅನುಭೋಗ ಹಕ್ಕು ಕಾಲಂ ದಲ್ಲಿ ಸಾಮೂಹಿಕ ಹಾದಿ ಎಂದು ನಮೂದು ಇದೆ ಅಂದರೆ ಸರಿ. ನಿಪಿ.9 ನೇದ್ದು ದಾವೆ ಹಾಕುವ ಕಾಲಕ್ಕೆ ಸಲ್ಲಿಸಿದ್ದೇನೆ ಅಂದರೆ ಸರಿ. ಈಗ ಸಾಕ್ಷಿಗೆ ಸಿ ಟಿ ಎಸ್ ಸರ್ವೆ ನಂಃ 914+915/3 ಪ್ರಾಪರ್ಟಿ ರಜಿಸ್ಟರ ಕಾರ್ಡಿನ ಪ್ರತಿ ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ.9 ಎಂದು ಗುರುತಿಸಲಾಯಿತು. ಸಿ ಟಿ ಎಸ್ ನಂಃ 914+915/3 ಇದನ್ನು ಕೆಡವಿ ನನ್ನ ಗಂಡ ಅಪಾರ್ಟಮೆಂಟ ಕಟ್ಟಿಸಿದ್ದಾರೆ ಅಂದರೆ ಸರಿ. ಸದರಿ ಅಪಾರ್ಟಮೆಂಟಿಗೆ ಸಾಮೂಹಿಕ ದಾರಿ ನಿಪಿ.8 ರಲ್ಲಿ ತೋರಿಸಿದ್ದು ಇದೆ ಅಂದರೆ ಸರಿ. ಈಗ ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿರುವ ಅಪಾರ್ಟಮೆಂಟ ಕಟ್ಟಡದ ಬಗ್ಗೆ ಒಪ್ಪಿಕೊಂಡಿರುವುದರಿಂದ ಸದರಿ ಪೋಟೋವನ್ನು ನಿಡಿ.10 ಎಂದು ಗುರುತಿಸಲಾಯಿತು. ಈ ಅಪಾರ್ಟಮೆಂಟ ಕಟ್ಟಲು ಎಲ್ಲರೂ 10 ನೇ ಪ್ರತಿವಾದಿ ಕಡೆಯಿಂದ ಸಾಲ ಪಡೆದು ಕಟ್ಟಿದ್ದಾರೆ ಅಂದರೆ ಸರಿ. ಸಾಲ ಪಡೆಯುವಾಗ ಸದರಿ ಆಸ್ತಿಯನ್ನು ಒತ್ತಿ ಹಾಕಿ ತೆಗೆದುಕೊಂಡಿದ್ದಾರೆ ಅಂದರೆ ಸರಿ. ಸದರಿ ಸಾಲವನ್ನು ತಿರುವಳಿ ಮಾಡಲು ಅಪಾರ್ಟಮೆಂಟಿನ ಒಂದನೇ ಅಂತಸ್ತನ್ನು ಪ್ರತಿವಾದಿ 7 ಹಾಗೂ 8 ರವರಿಗೆ ನನ್ನ ಸಹಿ ಇಲ್ಲದೆ ಮಾರಾಟ ಮಾಡಿದ್ದಾರೆ. ಪ್ರತಿವಾದಿ 7 ಹಾಗೂ 8 ರವರಿಗೆ ಮಾರಾಟ ಮಾಡಿದ ಹಣವನ್ನು ಸಾಲದ ಖಾತೆಗೆ 15 ಲಕ್ಷ ರೂ. ಜಮಾ ಆಗಿದೆ ಅಂದರೆ ಸರಿ. ಈಗ ಸಾಕ್ಷಿಗೆ ಬೈಲಹೊಂಗಲ್ ಅರ್ಬನ್ ಕೋ-ಆಪ್ ಬ್ಯಾಂಕಿನವರು ಕೊಟ್ಟ ದೃಢೀಕೃತ ಪ್ರತಿ ತೋರಿಸಲಾಗಿ ಅದನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.11 ಎಂದು ಗುರುತಿಸಲಾಯಿತು. ಈಗ 87 ಲಕ್ಷ 34 ಸಾವಿರದಾ 597 ರೂ. ಹಣ ಬಾಕಿ ಇದೆ ಅಂದರೆ, ಸಾಕ್ಷಿಯೂ ದಾಖಲೆ ನೋಡಿ ಹೌದು ಎಂದು ಒಪ್ಪಿಕೊಂಡಿದ್ದು, (ಎಲ್ ಎಂ ಎಸ್ ವಕೀಲರ ತಕರಾರಿನ ಮೇರೆಗೆ) ಸದರಿ ದಾಖಲೆಯನ್ನು ನಿಡಿ.12 ಎಂದು ಗುರುತಿಸಲಾಯಿತು.

**O.S.282-17 PW : 1**

ಪ್ರತಿವಾದಿ 10 ರವರು ಸದರಿ ಸಾಲದ ಸಲುವಾಗಿ ಅಪಾರ್ಟಮೆಂಟಿನ ನೆಲಮಹಡಿ ಮತ್ತು 2 ಹಾಗೂ 3 ನೇ ಮಹಡಿಗಳ ಆಸ್ತಿಗಳನ್ನು ಪ್ರತಿವಾದಿ 7 ಹಾಗೂ 8 ರವರಿಗೆ ಹರಾಜದಲ್ಲಿ ರೂ, 71 ಲಕ್ಷ ರೂ. ಗಳಿಗೆ ಮಾರಾಟ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. 10 ನೇ ಪ್ರತಿವಾದಿ ಸದರಿ ಕಟ್ಟಡದ ಕಬ್ಜಾವನ್ನು 7 ಹಾಗು 8 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಅಂದರೆ ಗೊತ್ತಿಲ್ಲ. ಪ್ರತಿವಾದಿ 7 ಹಾಗೂ 8 ರವರು 10 ನೇ ಪ್ರತಿವಾದಿ ಬ್ಯಾಂಕದಲ್ಲಿ 40 ಲಕ್ಷ ರೂ. ಸಾಲವನ್ನು ಪೂರ್ಣ ಆಸ್ತಿಯನ್ನು ಒತ್ತಿ ಸಾಲ ತೆಗೆದುಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ಈಗ ಪ್ರತಿವಾದಿ 7 ಹಾಗೂ 8 ರವರು ಅಪಾರ್ಟಮೆಂಟ ಮಾಲಿಕರು ಹಾಗೂ ಕಬ್ಜಾದಾರರು ಅಂದರೆ ಸರಿ. ಪೂರ್ಣ ಆಸ್ತಿ ಮಾರಾಟ ಮಾಡಿದ್ದರಿಂದ ನನಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 7 ಹಾಗೂ 8 ರವರ ಖರೀದಿ ಪತ್ರ ಹಾಗೂ ಸಾಲ ನನಗೆ ಬಾಂಧಯಿಸುತ್ತದೆ ಅಂದರೆ ಸರಿಯಲ್ಲ.

**ಮುಂದಿನ ಪಾಟಿ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.